ಕ್ರಿ.ಮಿ. ನಂ. 1444/2022
ಆರ್.ಡಬ್ಲು 2 ಮಲ್ಲಿಕಾರ್ಜುನ ತಂದೆ ಲಕ್ಷ್ಮಣ ಸಾ. ಇಂಗಳಗಿ

**ಸಾಕ್ಷಿಯನ್ನು ಇಂದು ದಿನಾಂಕಃ 27.06.2025 ರಂದು ಕರೆದು ಪ್ರಮಾಣೀಕರಿಸಲಾಯಿತು**

**ಪಾಟೀ ಸವಾಲು ಅರ್ಜಿದಾರ ಪರ ಶ್ರೀ ಬಿ.ಎ.ಡಿ. ವಕೀಲರಿಂದ**

ನನಗೆ ಮಲ್ಲಿನಾಥ ಲಕ್ಷ್ಮಣ ಗಾಡೆಕರ ಎಂದು ಸಹ ಕರೆಯುತ್ತಾರೆ ಎಂದರೆ ಸರಿಯಲ್ಲ. ಲಕ್ಷ್ಮಣ ಗಾಡೆಕರ ನನ್ನ ತಂದೆ ಎಂದರೆ ಸರಿ. ಸದರಿ ಹೆಸರಿನವರು ನಮ್ಮ ಊರಿನಲ್ಲಿ ನಮ್ಮ ತಂದೆಯವರು ಮಾತ್ರ ಇರುತ್ತಾರೆ ಎಂದರೆ ಸರಿ. ನನ್ನ ತಂದೆ ಈಗ ಆರೋಗ್ಯವಾಗಿ ಇದ್ದಾರೆ ಎಂದರೆ ಸರಿಯಲ್ಲ. ಅವರ ಆರೋಗ್ಯ ಸರಿಯಿಲ್ಲ. ಆದರೆ ಏನು ಆಗಿದೆ ಅಂತಾ ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆಗೆ ನಡೆಯಲು ಬರುತ್ತದೆ ಎಂದರೆ ಸರಿ. ಅವರಿಗೆ ಮಾತನಾಡಲು ಬರುತ್ತದೆ ಎಂದರೆ ಸರಿ. ನನ್ನ ತಂದೆ ಹೊಲದಲ್ಲಿ ಬೇರೆ ಇರುತ್ತಾರೆ. ನನ್ನ ತಂದೆಗೆ ಹಿರಿಯರಿಂದ ಬಂದ ಒಂದು ಮನೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಮನೆಯ ನಂಬರ 516 ಎಂದು ಇರುತ್ತದೆ ಎಂದರೆ ಸರಿಯಲ್ಲ. ಊರಿನಲ್ಲಿ ಇರುವ ಮನೆಯು ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಮನೆ ಇಲ್ಲ ಎಂದು ನುಡಿಯುತ್ತಾರೆ. ನಾನು ನಮ್ಮ ಊರಿನಲ್ಲಿ ಮನೆ ಇದ್ದರೂ ಸಹಿತ ಎದುರುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಮನೆ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತಂದೆ ತಾಯಿ ಮತ್ತು ಎದುರುದಾರರು ಒಂದೇ ಹೊಲದಲ್ಲಿ ಬೇರೆ ಬೇರೆಯಾಗಿ ಇರುತ್ತೇವೆ. ನಮ್ಮ ಮನೆಗಳು ಒಂದಕ್ಕೊಂದು ಹತ್ತಿಕೊಂಡು ಇರುವುದಿಲ್ಲ, ದೂರದಲ್ಲಿ ಇರುತ್ತವೆ. ನನ್ನ ಮತ್ತು ನನ್ನ ತಂದೆಯ ಮನೆ ಮತ್ತು ನನ್ನ ತಮ್ಮನ ಮನೆಗೆ 300 ಮೀಟರ ಅಂತರ ಇರುತ್ತದೆ.

2. ನನಗೆ ಈ ಪ್ರಕರಣದಲ್ಲಿ ಅರ್ಜಿದಾರ ಮತ್ತು ಎದುರುದಾರರ ಮಧ್ಯೆ ಏನು ತಂಟೆ ಇರುತ್ತದೆ ಅಂತಾ ಗೊತ್ತಿಲ್ಲ. ನಾನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ಬರುವುದಕ್ಕಿಂತ ಮುಂಚೆ ಎದುರುದಾರರು ಪ್ರಕರಣದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ನಮೂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಮುಖ್ಯ ವಿಚಾರಣೆಯನ್ನು ನನ್ನ ಮುಂದೆ ಟೈಪ್ ಮಾಡಿಸಿಲ್ಲ ಎಂದರೆ ಸರಿ. ನಾನು, ನನ್ನ ತಮ್ಮ ಮತ್ತು ನನ್ನ ತಂದೆ ಪಾಲು ವಿಭಾಗ ಮಾಡಿಕೊಂಡು ಬೇರೆ ಬೇರೆಯಾಗಿ ಇದ್ದೇವೆ. ನಾವು ಪಾಲು ವಾಟ್ನಿ ಮಾಡಿಕೊಂಡ ಬಗ್ಗೆ ದಾಖಲೆ ಮಾಡಿಸಿಕೊಂಡಿಲ್ಲ. ನಾನು ಎಷ್ಟು ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತೇವೆ ಅಂತಾ ನೆನಪು ಇಲ್ಲ. ಸದರಿ ವಿಭಾಗವು ನಮ್ಮ ನಮ್ಮ ಮಧ್ಯೆ ಆಗಿರುತ್ತದೆ, ಅದಕ್ಕೆ ಯಾರು ಸಾಕ್ಷಿಗಳು ಇರುವುದಿಲ್ಲ.

ಸಾಕ್ಷಿಯು ನನಗೆ ಹುಷಾರು ಇಲ್ಲ, ಮುಂದಿನ ದಿನಾಂಕದಂದು ಸಾಕ್ಷಿಯನ್ನು ನುಡಿಯುತ್ತೇನೆ ಎಂದು ಹೇಳಿರುತ್ತಾರೆ. ಆದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

ಓ.ಹೇ.ಕೆ.ಸರಿ.ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ.ಆಳಂದ.